ಮೂಲಕ ಬೆಂಗಳೂರಿನ ಖಜಾನೆ ಕೇಂದ್ರದಲ್ಲಿ ಗುರುತಿಸಿ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಹಂತದಲ್ಲಿ ಅಂಚೆ ಕಛೇರಿಗಳ ಮೂಲಕ ಪಾವತಿ ಮಾಡಲಾಗುತ್ತಿದೆ. ಸದರಿ ಗಣಕ ಕೇಂದ್ರದ ಗಣಕೀ ಯಂತ್ರವು ಒಮ್ಮಿಂದೊಮ್ಮೆಲೇ ಕೆಟ್ಟು ಹೋದ ಕಾರಣ ಮಾರ್ಚ್ 95ರಲ್ಲಿ ಸರ್ಕಾರೀ ತಾಂತ್ರಿಕ ಸಲಹಾ ಸಮಿತಿಯು ನೀಡಿದ ಅನುಮೋದನೆಯ ಮೇರೆಗೆ ಮೇ 1995ರಲ್ಲಿ ಸದರಿ ನೂತನ ಗಣಕ ಯಂತ್ರವನ್ನು ಖರೀದಿಸಿ ಸಾಗಿಸಲಾತು. ಅಂದಿನಿಂದ ಬಾಕಿಯಾದ ಜನವರಿ 1995ರಿಂದ ಜೂನ್ 1995ರ ವರೆಗಿನ ಆರು ತಿಂಗಳ ಬಾಕಿ ಪಾವತಿಯ ಮನಿಯಾರ್ಡರ್ ನಮೂನೆಗಳನ್ನು ಕೂಡಲೇ ಮುದ್ರಿಸಿ ಜುಲೈ 1995 ರೊಳಗಾಗಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಿಗೆ (ಕಛೇರಿಗಳಿಗೆ) ಕಳುಹಿಸಿ ಅಂಚೆ ಕಛೇರಿಯ ಮೂಲಕ ಪಾವತಿಸುವ ವಿರ್ಪಾಡು ಮಾಡಲಾಗಿದೆ. ಜುಲೈ ಮತ್ತು ಆಗಸ್ಟ್ 1995ರ ಎರಡು ತಿಂಗಳುಗಳ ಮುಂದಿನ ಬಾಕಿ ಕುರಿತಂತೆ ಮನಿಯಾರ್ಡರ್ ನಮೂನೆಗಳನ್ನು ಆಗಸ್ಟ್ 1995ರಲ್ಲಿ ಒಂದೇ ಕಂತಿನಲ್ಲಿ ಮುದ್ರಿಸಿ ಈಗಾಗಲೇ ಮುಂಚಿತವಾಗಿ ಎಲ್ಲಾ ಜಿಲ್ಲಾ ಖಜಾನೆಗಳಿಗೆ ಕಳುಹಿಸಲಾಗಿದೆ. ಈ ಮನಿಯಾರ್ಡರ್ಗಳು ಬಹುತೇಕ 1995ರ 9ನೇ ತಿಂಗಳ ನಂತರವೇ ಪಾವತಿಯಾಗಬೇಕಾಗಿರುತ್ತದೆ. ಈಗ ಖಜಾನೆ ಗಣಕ ಕೇಂದ್ರದ ಗಣಕ ಯಂತ್ರವು ಸುಸ್ಥಿತಿಯಲ್ಲಿ ನಿರ್ವಹಿಸುತ್ತಿದೆಯಾದ್ದರಿಂದ ಇನ್ನು ಮುಂದಿನ ಯಾವುದೇ ಪಾವತಿಗಳನ್ನು ಬಾಕಿಯಾಗದಂತೆ ನೋಡಿಕೊಳ್ಳಲಾಗುವುದು.

(ii) ಸರ್ಕಾರಿ ನೌಕರರಿಗೆ ವಾಹನ ಮುಂಗಡ ಹಣ ಬಿಡುಗಡೆಯಾಗದಿರುವ ಬಗ್ಗೆ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರೀ ನೌಕರರಿಗೆ ವಾಹನ ಮುಂಗಡ ಹಣಕ್ಕಾಗಿ ಕೋರಿ ವಿವಿಧ ಇಲಾಖೆಗಳಿಂದ ಆರ್ಥಿಕ ಇಲಾಖೆಗೆ ಮಾರ್ಚ್ ತಿಂಗಳಿನಲ್ಲಿಯೇ ಮನವಿಗಳನ್ನು ಸಲ್ಲಿಸಲಾಗಿದ್ದು, ಈವರೆವಿಗೂ ಈ ಹಣವನ್ನು ಬಿಡುಗಡೆ ಮಾಡಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಇದಕ್ಕೆ ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ನಾನು ಹಣಕಾಸಿನ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಕಳೆದ ವರ್ಷದ 1994-95ನೇ ಸಾಲಿನಲ್ಲಿ 314.45 ಲಕ್ಷ ರೂ.ಗಳನ್ನು ವಾಹನಗಳಿಗಾಗಿ ಕೊಡಲಾಗಿದೆ. ಈ ವರ್ಷ ಮುಂಗಡ ಪತ್ರದಲ್ಲಿ ಸಾಕಷ್ಟು ಹಣ ಇದೆ. ವಾಹನಗಳ ಮುಂಗಡಕ್ಕಾಗಿ ಅರ್ಜಿ ಇಲಾಖೆ ಮುಖಾಂತರ ಏನು ಬರುತ್ತಿವೆ ಆ ಪ್ರಕಾರ ಹಣದ ಮಂಜೂರು ಆಗುತ್ತಿದೆ. ಯಾವ ಪ್ರಕರಣದಲ್ಲಿ ಹಣ ಮಂಜೂರು ಆಗಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(iii) ಸಿರಾ ತಾಲ್ಲೂಕಿನ ಬುಕ್ಕಾ ಪಟ್ಟಣದಲ್ಲಿ ವಿದ್ಯುತ್ ಕೇಂದ್ರದ ಉಪಸ್ಥಾವರ ಸ್ಥಾಪನೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಬುಕ್ಕಾಪಟ್ಟ ಹೋಬಳಿ ಕೇಂದ್ರವಾಗಿದ್ದು, ವಿದ್ಯುತ್ ಅಭಾವದಿಂದ ಜನರು ತೀವ್ರತರ ತೊಂದರೆ ಅನುಭವಿಸುತ್ತಿದ್ದು ಅಲ್ಲಿ ಒಂದು ವಿದ್ಯುತ್ ಕೇಂದ್ರದ ಉಪ ಸ್ಥಾವರ ಮಂಜೂರಾತಿಗಾಗಿ ಅನೇಕ ಮನವಿಗಳನ್ನು ಸಲ್ಲಿಸಿದಾಗ್ಯೂ ಅದು ಕಾರ್ಯಗತವಾಗಿರುವುದಿಲ್ಲ. ಕೂಡಲೇ ಉಪ ಮುಖ್ಯಮಂತ್ರಿಗಳು ಅದರ ಕಡೆ ಗಮನಹರಿಸಿ ಉಪಸ್ಥಾವರವನ್ನು ಇದೇ ವರ್ಷದಲ್ಲಿ ಮಂಜೂರಾತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಆಶ್ವಾಸನೆ ನೀಡುವಿರಾ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಒಂದು 66:11 ಕೆ.ವಿ. 18 6.3 ಎಂ.ವಿ.ಎ., ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಮಂಡಳಿಯ ತಾಂತ್ರಿಕ ಸಮಿತಿಯು ಜೂನ್ 95ರಲ್ಲಿ ಅನುಮೋದನೆ ನೀಡಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 156.5 ಲಕ್ಷ ರೂ. ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1995-96)ರ ಆಯವ್ಯಯದಲ್ಲಿ 20 ಲಕ್ಷ ರೂ.ಗಳನ್ನು ಒದಗಿಸಿದೆ. ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯು ಲಭ್ಯವಿದೆ. ಈ ವಿದ್ಯುತ್ ಉಪಕೇಂದ್ರಕ್ಕೆ ಹಿರಿಯೂರು - ಶಿರಾ 66 ಕೆ.ವಿ. ವಿದ್ಯುತ್ ಲೈನಿನಿಂದ ಸುಮಾರು 16 ಕಿ.ಮೀ. ಉದ್ದದ ಟ್ಯಾಪ್ಪಿನನ್ನು ನಿರ್ಮಾಣ ಮಾಡಬೇಕಾಗಿದ್ದು, ಇದರ ಸಮೀಕ್ಷೆ (ಸರ್ವೆ) ಕಾರ್ಯವನ್ನು ಶೀಘ್ರದಲ್ಲೇ ತೆಗೆದುಕೊಳ್ಳಲಾಗುವುದು. ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಿದೆ.

(iv) ತುಳು ಮತ್ತು ಕೊಂಕಣಿ ಅಕಾಡೆಮಿಗಳಿಗೆ ಅನುದಾನ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 26 ಲಕ್ಷ ತುಳು ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು, ಮತ್ತು ಅಷ್ಟೇ ಸಂಖ್ಯೆಯಲ್ಲಿ ಕೊಂಕಣಿ ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು ಇರುವುದರಿಂದ ಈಗಾಗಲೇ ಹಲವು ಶ್ರೇಷ್ಠ ತುಳು ಸಾಹಿತ್ಯ ಹಾಗೂ ಕೊಂಕಣಿ ಸಾಹಿತ್ಯದಲ್ಲಿ ಪ್ರತಿಗಳು ಪ್ರಕಟಣೆ ಆಗಿದ್ದು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾದದ್ದರಿಂದಲೂ ವಿಶ್ವ ತುಳು ಸಮ್ಮೇಳನ ಮತ್ತು ವಿಶ್ವ ಕೊಂಕಣಿ ಸಮ್ಮೇಳವನ್ನು ಸಂಘಟಿಸಿ ಭಾಷೆಯನ್ನು ಇನ್ನಷ್ಟು ಬೆಳಗಿಸಲು ಪ್ರಯತ್ನಿಸುವ ಸಹಕಾರ ಮತ್ತು ಅನುದಾನಳಿಂದ ಕೂಡಿದ ಪ್ರೋತ್ಸಾಹವನ್ನು ಕೊಟ್ಟು ಮುಂದುವರಿಸಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಲ್ಲ. ಅವರಿಂದ ನಾನು ಉತ್ತರವನ್ನು ತರಿಸಿಕೊಡುತ್ತೇನೆ. ಮಾನ್ಯ 'ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

(v) ಕರ್ನಾಟಕ ಸರ್ಕಾರಿ ಸಾಬೂನು ಕಾರ್ಖಾನೆಯ ಪುನರುಜ್ಜೀವನ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, 1992ರಲ್ಲಿ ಬಿ.ಐ.ಎಫ್.ಆರ್.ನಲ್ಲಿ ನೋಂದಣಿ ಮಾಡಲಾಗಿರುವ ಕರ್ನಾಟಕ ಸರ್ಕಾರೀ ಸಾಬೂನು ಕಾರ್ಖಾನೆಯ ಪುನರುಜ್ಜೀವನವನ್ನು ಕುರಿತು ಇದುವರೆಗೆ ರಾಜ್ಯಸರ್ಕಾರ ಯಾವುದೇ ವರದಿಯನ್ನೂ ಸಲ್ಲಿಸಿಲ್ಲ. 9-8-95ರಂದು ಬಿ.ಐ.ಎಫ್.ಆರ್. ಸಭೆ ನವದೆಹಲಿಯಲ್ಲಿ ನಡೆದಾಗ ಸರ್ಕಾರದ ಕಡೆಯಿಂದ ಯಾವುದೇ ಜವಾಬ್ದಾರಿಯುತ ಅಧಿಕಾರಿ ಅಲ್ಲಿ ಭಾಗವಹಿಸಲಿಲ್ಲ. ಅಲ್ಲಿಯ ನ್ಯಾಯಾಧೀಶರು ಕಳೆದ 3 ವರ್ಷದಿಂದಲೂ ರಾಜ್ಯಸರ್ಕಾರ ಸಬೂಬು ಹೇಳುತ್ತಾ ಬಂದು ಪುನರುಜ್ಜೀವನಗೊಳಿಸುವ ಕುರಿತು ಯಾವುದೇ ವರದಿಯನ್ನೂ ಸಲ್ಲಿಸದೇ ಇರುವ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಆತಂಕ ತರುವ ವಿಚಾರವೆಂದರೆ 2 ತಿಂಗಳೊಳಗಾಗಿ ರಾಜ್ಯಸರ್ಕಾರ ಈ ಕಾರ್ಖಾನೆಯ ಪುನರುಜ್ಜೀವನದ ಬಗ್ಗೆ ವರದಿಯನ್ನು ಸಲ್ಲಿಸದಿದ್ದರೆ ಸಾಬೂನು ಕಾರ್ಖಾನೆಯನ್ನು ಹರಾಜು ಮಾಡಲು ಐ.ಡಿ.ಬಿ.ಐ. ಬ್ಯಾಂಕಿಗೆ ಬಿ.ಐ.ಎಫ್.ಆರ್. ಆದೇಶವನ್ನು ನೀಡಿದೆ. ಈ ಗಂಭೀರ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಾ